

ಸಂಪಾದಕೀಯ

# ಭಕ್ತರ ಭಾವಪ್ರಪಂಚ



ಸಾಧು-ಸಂತರ ಜೀವನದಲ್ಲಿ ನಾವು ಅನೇಕ ಅಸಾಧಾರಣ ಘಟನೆಗಳನ್ನು ನೋಡುತ್ತೇವೆ. ಮೇಲ್ನೋಟಕ್ಕೆ ಅವರು ಸಾಮಾನ್ಯ ರಂತೆ, ಕೆಲವು ವೇಳೆ ಅತ್ಯಂತ ದೀನ, ಹೀನರಂತೆ ಕಾಣಿಸುತ್ತಾರೆ. ಆದರೆ ಅವರ ಅಂತರಂಗವೆಂಬ ಕುಲುಮೆಯಲ್ಲಿ ದೈವೀಭಾವದ ಅಗ್ನಿ ಧಗಧಗಿಸುತ್ತದೆ; ಅವರ ನಡೆನುಡಿ, ಮಾತು, ಕ್ರಿಯೆಗಳೆಲ್ಲವೂ ಸಾಮಾನ್ಯರ ದೃಷ್ಟಿಗೆ ವಿಚಿತ್ರವೆನಿಸುತ್ತದೆ. ನಮ್ಮ ದೇಶದಲ್ಲಿ ಆಗಿ ಹೋದ ಅಸಂಖ್ಯಾತ ಮಂದಿ ಸಾಧು-ಸಂತರಲ್ಲಿ ಒಬ್ಬೊಬ್ಬರ ಜೀವ ನವೂ ಅತ್ಯದ್ಭುತವಾದದ್ದು; ಅನೇಕರ ಅಂತರಂಗದ ಪ್ರಯಾಣ ಕಥೆ ಸ್ವಲ್ಪವೂ ಉಲ್ಲೇಖಗೊಳ್ಳದೆ ತೆರೆಯ ಮರೆಗೆ ಸಂದಿವೆ. ಆದರೆ ನಮಗೆ ತಿಳಿದುಬರುವ ಸಂತರ ಜೀವನಕಥೆಗಳಂತೂ ಅತ್ಯಂತ ಕುತೂಹಲ ಕಾರಿಯಾಗಿವೆ, ವಿಸ್ಮಯಕರವೆನಿಸಿವೆ. ಸಾಮಾನ್ಯರ ಮನಸ್ಸಿನಲ್ಲೂ ದೈವೀ ಭಾವದ ಕಿಡಿಯನ್ನು ಹತ್ತಿಸಬಲ್ಲ ರೀತಿಯಲ್ಲಿವೆ. ಆಧ್ಯಾತ್ಮಿಕ ಬದು ಕಿನ ನಿಷ್ಕಲ್ಮಷ, ಸರಳ ಹಾಗೂ ದಾರುಣ ಚಿತ್ರಗಳು ನಮ್ಮ ಗಮನ ವನ್ನು ಸಂಪೂರ್ಣವಾಗಿ ಸೆಳೆಯುತ್ತವೆ.

ಅನೇಕ ಬಾರಿ ಸಾಧು, ಸಂತರುಗಳ ವಿಚಿತ್ರ ನಡವಳಿಕೆಗಳು ನಮಗೆ ಅರ್ಥವಾಗುವುದಿಲ್ಲ. ಅವನೇಕೆ ಹೀಗೆ ಮಾಡಿದ? ಇದು ತಪ್ಪಾಗಿ ಹೋಯಿತಲ್ಲ? ಈ ರೀತಿ ಅವನು ಮಾಡಬಾರದಾಗಿತ್ತು, ಬೇರೆ ಏನಾದರೂ ಮಾಡಿದ್ದರೆ ಚೆನ್ನಾಗಿರುತ್ತಿತ್ತು - ಹೀಗೆಲ್ಲ ನಾವು ಪ್ರತಿಕ್ರಿಯೆ ನೀಡುತ್ತೇವೆ. ಆದರೆ ಅವರ ಈ ವಿಚಿತ್ರ ವರ್ತನೆಗಳು ಯಾವುದೇ ಬಗೆಯ ತಪ್ಪು ಹೆಜ್ಜೆಯಲ್ಲ ; ವಿಚಿತ್ರ ವ್ಯಕ್ತಿಯೊಬ್ಬನ ಅಪ್ರಾಸಂಗಿಕ ನಡವಳಿಕೆಯಲ್ಲ. ಅದರ ಹಿಂದೆ ಒಂದು ವಿಶೇಷ ಅರ್ಥವಿದೆ, ಒಂದು ಉದ್ದೇಶವಿದೆ - ಇದನ್ನು ನಾವು ಕಂಡು ಕೊಳ್ಳಲು ಯತ್ನಿಸಬೇಕು. ಈ ವಿಶೇಷ ಅರ್ಥವು ನಮಗೆ ಮನವರಿಕೆ ಯಾದಾಗ, ಆ ವ್ಯಕ್ತಿತ್ವದ ಮಹಿಮೆ ಇನ್ನಷ್ಟು ಬೆಳಗುತ್ತದೆ. ಅದನ್ನು ಕಂಡುಕೊಂಡ ನಮ್ಮ ಒಳಗೂ ಏನೋ ವಿದ್ಯುತ್ ಸಂಚಾರವಾಗು ತ್ತದೆ. ಆಧ್ಯಾತ್ಮಿಕ ಲೋಕದ ಇಂತಹ ವಿಚಿತ್ರ ಘಟನೆಗಳಲ್ಲಿ ಕೆಲವನ್ನು ಇಲ್ಲಿ ನೋಡೋಣ.

### 'ನನಗೆ ಕಷ್ಟವನ್ನೇ ಕರುಣಿಸು ದೇವಾ...'

ಮಹಾಭಾರತವೆಂಬ ಮಹಾಸಮುದ್ರದಲ್ಲಿ ಎದ್ದು ಬರುವ, ತೇಲಿ ಮುಳುಗುವ ಅಸಂಖ್ಯಾತ ಪಾತ್ರಗಳಲ್ಲಿ ಕುಂತಿ ಕೂಡ ಒಬ್ಬಳು. ದೊಡ್ಡ ರಾಜ್ಯದ ರಾಣಿಯಾಗಿ ಬಂದರೂ ಅವಳ ಕಷ್ಟಗಳಿಗೆ ಕೊನೆ ಯಿಲ್ಲ. ವೀರಾಧಿವೀರರ ತಾಯಿ; ಆದರೂ ವನವಾಸ ತಪ್ಪಲಿಲ್ಲ (ಸಾಮಾಜಿಕ ನಿಂದೆಗೆ ಹೆದರಿ ಹಿರಿಯ ಮಗನನ್ನೇ ತ್ಯಜಿಸಬೇಕಾ ಯಿತು.) ಮುಂದೆ ಭೀಕರ ಯುದ್ಧ ನಡೆದಾಗ ಎಲ್ಲಕ್ಕೂ ಸಾಕ್ಷಿಯಾಗಿ ನಿಂತವಳು. ಜೀವನದ ಏರುಪೇರು, ಕಷ್ಟ-ಸುಖ, ದುರಂತ, ಕ್ರೌರ್ಯ, ಜಟಿಲತೆ - ಎಲ್ಲವನ್ನೂ ಕಂಡ ನಂತರ, ಒಂದು ಬಾರಿ ಕೃಷ್ಣನನ್ನು ಅವಳು ಬೇಡುತ್ತಾಳೆ: ''ಓ ಕೃಷ್ಣ, ನನಗೆ ಇನ್ನಷ್ಟು ಕಷ್ಟಗಳನ್ನೇ ಕೊಡು - ಇದು ನನ್ನ ಪ್ರಾರ್ಥನೆ. ಇದರಿಂದ ನಾನು ಯಾವಾಗಲೂ ನಿನ್ನನ್ನು ಮರೆಯದೆ, ಸದಾಕಾಲ ಸ್ಮರಿಸಲು ಸಾಧ್ಯವಾಗುವುದು.''

ಇದೆಂಥ ಪ್ರಾರ್ಥನೆ? ಪ್ರಪಂಚದಲ್ಲಿ ಎಲ್ಲರೂ ಕಷ್ಟಗಳಿಂದ ಪಾರುಮಾಡು ಎಂದೇ ಬೇಡುತ್ತಾರೆ. ಕಷ್ಟ, ಸುಖಗಳು ಜೀವನ ವೆಂಬ ಪ್ರಯಾಣದಲ್ಲಿ ಒಂದಾದ ಮೇಲೊಂದರಂತೆ ಬಂದು ಹೋಗು ತ್ತವೆ; ಆದರೆ ಮಾನವನು ಬಯಸುವುದು ಸುಖವನ್ನು ಮಾತ್ರ. ಭಗವಂತನಲ್ಲಿ ನಂಬಿಕೆ ಹೊಂದಿರುವವರೆಲ್ಲ , 'ಕೊನೆಗೆ ಇವನಾ ದರೂ ಒಬ್ಬ ಆಸರೆ ಸಿಕ್ಕಿದ' ಎಂದು ಭರವಸೆ ತಾಳಿ, ಅವನನ್ನು ನಾನಾ ಬಗೆಯ ಆಸೆಗಳಿಗಾಗಿ ಪ್ರಾರ್ಥಿಸುತ್ತಾರೆ. ಮಾನವನ ಮನಸ್ಸು ಈ ಬಗೆಯಲ್ಲಿ ಚಿಂತಿಸುವುದೇ ಸಹಜ. ಆದರೆ 'ಕಷ್ಟವನ್ನೇ ನಿರಂತರ ಕೊಡು' ಎಂದು ಯಾರು ಪ್ರಾರ್ಥಿಸುತ್ತಾರೆ? ಕುಂತಿಯ ಪ್ರಾರ್ಥನೆ ಉಳಿದ ಎಲ್ಲರ ಪ್ರಾರ್ಥನೆಗಿಂತ ಈ ರೀತಿಯಲ್ಲಿ ಭಿನ್ನವಾಗಿ ನಿಲ್ಲುತ್ತದೆ. ಜೀವನ ಪೂರ್ತಿ ಸಂಕಟವನ್ನೇ ಕಂಡವಳು, ಅದರಿಂದ ತಾನು ಹೇಗೆ ಭಗವಂತನನ್ನೇ ಅವಲಂಬಿಸಿ ಬದುಕಬೇಕಾಯಿತು, ತನ್ನ ಬದುಕಿನಲ್ಲಿ ಭಗವಂತನ ಕೃಪೆ ಹೇಗೆ ತನ್ನ ಆಂತರಿಕ ಧೈರ್ಯ-ಸ್ಥೈರ್ಯಗಳನ್ನು ದೃಢಗೊಳಿ ಸಿತು ಎಂದು ಅವಳು ಕಂಡುಕೊಂಡರಬೇಕು. ಒಂದು ವೇಳೆ ಇಂಥ ಕಷ್ಟಗಳಿಲ್ಲದೆ, ಅರಮನೆಯಲ್ಲಿ ರಾಣಿಯಾದ ತಾನು ಅನೇಕ ಮಂದಿ ದಾಸಿಯರ, ಸಖಿಯರ, ಬಂಧುಬಾಂಧವರ ಜೊತೆಗೆ ಸುಖ ವಾಗಿರುತ್ತಿದ್ದರೆ ತನಗೆ ಭಗವಂತನ ನೆನಪಾಗುತ್ತಿತ್ತೆ ? ಭೋಗಲಾಲಸೆ ಯಲ್ಲಿ , ಸುಖದ ಸುಪ್ಪತ್ತಿಗೆಯಲ್ಲಿ ಎಲ್ಲವನ್ನೂ ಮೈಮರೆಯುತ್ತಿರ ಲಿಲ್ಲವೆ? ಈ ರೀತಿ ಅವಳ ಮನಸ್ಸು ಅವಲೋಕಿಸಿ ತಿಳಿದುಕೊಂಡರ ಬೇಕು. ಜೀವನದ ನಶ್ವರ ಸ್ಥಿತಿಗತಿಯನ್ನು, ಏಳುಬೀಳುಗಳನ್ನು ಕಂಡುಂಡು ಪಕ್ವವಾದ ಮನಸ್ಸು ಕುಂತಿಯದು. ಅವಳ ಮನದ ಆಳದಿಂದೆದ್ದ ಈ ಪ್ರಾರ್ಥನೆಯು ಉಳಿದವರಿಗೆ ವಿಚಿತ್ರವೆನಿಸ ಬಹುದು; ಆದರೆ ವಾಸ್ತವ ಸತ್ಯದ ಅರಿವಿದ್ದವರಿಗೆ ಅತ್ಯಂತ ನೈಜ ಪ್ರಾರ್ಥನೆಯಾಗಿ ಕಾಣಿಸುವುದು.



## ಸೂರದಾಸ – 'ಮರಳಿ ಕುರುಡನನ್ನಾಗಿಸು, ಕೃಷ್ಣಾ!'

ಸೂರದಾಸ ಕೃಷ್ಣನ ಪರಮಭಕ್ತ. ವೃಂದಾವನದಲ್ಲೆಲ್ಲ ಓಡಾಡುತ್ತ, ಕೃಷ್ಣನ ನಾಮವನ್ನೇ ಸದಾ ಜಪಿಸುತ್ತಿದ್ದ. ಕುರುಡನಾಗಿದ್ದರೂ, ಸೂರದಾಸನ ಒಳಗಣ್ಣು ಸದಾ ತೆರೆದಿರುತ್ತಿತ್ತು. ಒಂದು ಸಲ ಓಡಾಡುತ್ತ ಇದ್ದ ಸೂರದಾಸ ಒಂದು ಬಾವಿಗೆ ಬಿದ್ದುಬಿಟ್ಟ. ಬೇರೆ ದಾರಿ ಕಾಣದೆ ಸದಾ ತಾನು ಸ್ಮರಿಸುತ್ತಿದ್ದ ಕೃಷ್ಣನ್ನೇ ಬೇಡಿಕೊಂಡ, ''ಕರುಣಾಮಯಿ ಕೃಷ್ಣ! ನನ್ನನ್ನು ಈ ಬಾವಿಯಿಂದ ಮೇಲೆತ್ತಿ ಕಾಪಾಡು!'' ಆಗ ಕೃಷ್ಣನು ಬಾಲಕನ ರೂಪದಲ್ಲಿ ಬಂದು, ''ನಿನ್ನ ಕೈ ಕೊಡು, ಮೇಲಕ್ಕೆತ್ತುತ್ತೇನೆ'' ಎಂದು ಸೂರದಾಸನಿಗೆ ಕೈನೀಡಿದ. ಕೃಷ್ಣನ ಕೈಯ ಸ್ಪರ್ಶದಿಂದ ಸೂರದಾಸನ ಮೈಯೆಲ್ಲವೂ ರೋಮಾಂಚನಗೊಂಡಿತು. ಬಾವಿಯಿಂದ ಹೊರಬಂದ ಬಳಿಕ, ಸೂರದಾಸನು ಕೃಷ್ಣನ ಕೈಯನ್ನು ಬಲವಾಗಿ ಹಿಡಿದುಕೊಂಡ. ಆದರೆ ಅವನ ಕೈಯಿಂದ ಬಿಡಿಸಿಕೊಂಡ ಕೃಷ್ಣನು ಅಲ್ಲಿಂದ ಓಡಿಹೋದ. ಆಗ ಸೂರದಾಸ ಕೃಷ್ಣನಿಗಾಗಿ ಹಾತೊರೆಯುತ್ತಾ ಅವನನ್ನು ಪ್ರಾರ್ಥಿಸುತ್ತಾ ನಾಮಜಪದಲ್ಲೇ ಮುಳುಗುತ್ತಾನೆ. ಕೊನೆಗೆ ಭಕ್ತನ ಮೊರೆಗೆ ಸುಮ್ಮನಿರಲಾರದ ಕೃಷ್ಣನು ಸೂರದಾಸನಿಗೆ ದರ್ಶನ ನೀಡುತ್ತಾನೆ.



ಅಪಾರ ಕರುಣೆಯಿಂದ ಸೂರದಾಸನ ಕುರುಡುತನವನ್ನು ಅವನು ನಿವಾರಿಸುತ್ತಾನೆ. ಹೊಸದಾಗಿ ಬಂದ ದೃಷ್ಟಿಯಿಂದ ಕೃಷ್ಣನನ್ನೇ ಕಣ್ತುಂಬಾ ನೋಡಿ ಸೂರದಾಸ ಮೈಮರೆಯುತ್ತಾನೆ. ಆಗ ಕೃಷ್ಣನು, 'ನಿನಗೇನು ಬೇಕೋ, ಕೇಳು' ಎಂದ. ಕೃಷ್ಣನ ದರ್ಶನದಿಂದ ಪುನೀತನಾದ ಸೂರದಾಸ ಹೀಗೆ ಹೇಳಿದ: ''ಕೃಷ್ಣಾ, ನನಗೆ ನೀನು ಎಲ್ಲವನ್ನೂ ಕೊಟ್ಟುಬಿಟ್ಟಿದ್ದೀಯೆ. ನಿನ್ನ ದರ್ಶನವನ್ನೇ ಪಡೆದ ಮೇಲೆ ನನಗೆ ಇನ್ನೇನು ಬೇಕು? ನಿನ್ನನ್ನು ಕಂಡ ಈ ಕಣ್ಣುಗಳು ಪ್ರಪಂಚದಲ್ಲಿ ಇನ್ನೇನನ್ನೂ ನೋಡ ಬಯಸುವುದಿಲ್ಲ. ಆದ್ದರಿಂದ ಮೊದಲಿನಂತೆಯೇ ನನ್ನನ್ನು ಕುರುಡನನ್ನಾಗಿಸು.'' ಶ್ರೀಕೃಷ್ಣನು ಅವನನ್ನು ಕುರುಡನನ್ನಾಗಿ ಮಾಡಿದ.

ಕಣ್ಣಿಲ್ಲದವರಗೆ ಕಣ್ಣು ದೊರಕಿದರೆ, ಅದಕ್ಕಿಂತ ಸೌಭಾಗ್ಯ ಇನ್ನೇನಿದೆ? ಒಂದಿಷ್ಟು ದೃಷ್ಟಿ ದೋಷವಾದರೂ ಲಕ್ಷಗಟ್ಟಲೆ ಖರ್ಚು ಮಾಡಿ, ಆಪರೇಷನ್ ಮಾಡಿಸಿ ಕಣ್ಣನ್ನು ಸರಿಪಡಿಸಿಕೊಳ್ಳಲು ಯತ್ನಿಸುವವರೇ ಅಧಿಕ. ಆದರೆ ಭಗವಂತನ ಕೃಪೆಯಿಂದ ಕಣ್ಣು ಲಭಿಸಿದ ನಂತರವೂ ಒಬ್ಬ ಭಕ್ತನು 'ನನ್ನನ್ನು ಮೊದಲಿನಂತೆ ಕುರುಡನನ್ನಾಗಿ ಮಾಡು' ಎಂದು ದೇವರನ್ನು ಪ್ರಾರ್ಥಿಸುವುದು ಹುಚ್ಚುತನವಲ್ಲವೆ? ಆದರೆ ಸೂರದಾಸನ ಭಕ್ತಿ ಅಂತಹದಾಗಿತ್ತು. ಒಂದು ಬಾರಿ ಭಗವದ್ದರ್ಶನವಾದ ನಂತರ ಬೇರೆ ಏನನ್ನೂ ನೋಡುವ ಆಸೆ ಅವನಿಗೆ ಉಳಿಯಲಿಲ್ಲ. ಬಾವಿಗೆ ಬೀಳುವ ಮುನ್ನ ಅವನು ತನ್ನ ಅಂತರಂಗದಲ್ಲಿ ಭಗವಂತನನ್ನು ಕಾಣುತ್ತಿದ್ದ; ಈಗ ಕಣ್ಣುಗಳಿಂದ ನೇರವಾಗಿ ನೋಡಿದ. ಆ ದರ್ಶನದಿಂದ ಅವನ ಆಸೆಗಳೆಲ್ಲವೂ ಈಡೇರಿದವು. ದಿವ್ಯದರ್ಶನದ ಸ್ಮರಣೆಯಿಂದಲೇ ಅವನ ಜೀವನವೆಲ್ಲ ಕೃಷ್ಣಮಯವಾಗುವುದು. ಆದ್ದರಿಂದ ಅಲ್ಲಿ ಮತ್ತೆ ಪ್ರಪಂಚದ ದೃಶ್ಯಗಳೆಲ್ಲ ಆವರಿಸಿಕೊಂಡು, ಅವನ ಅಂತರಂಗವನ್ನು ಕಲುಷಿತಗೊಳಿಸದಿರಲಿ. ಎಂಥ ಉದಾತ್ತ ಭಾವನೆ! ದಿವ್ಯ ಭಗವನ್ನಾಮದಿಂದ ತುಂಬಿದ ಮನಸ್ಸು ಆಲೋಚಿಸುವ ರೀತಿ ವಿಚಿತ್ರವಾಗಿದ್ದಿರಬಹುದು; ಆದರೆ ಅದು ಎಷ್ಟೊಂದು ಉನ್ನತ ಸ್ಥಿತಿಗೇರಿರಬೇಕು!

## ರುಚಿ ನೋಡಿ ಹಣ್ಣನ್ನು ಅರ್ಪಿಸಬಹುದೆ?

ರಾಮಾಯಣದಲ್ಲಿ ಶ್ರೀರಾಮನು ಸೀತೆಯನ್ನು ಹುಡುಕುತ್ತಾ ಪಂಪಾಸರೋವರಕ್ಕೆ ಬಂದು, ಅಲ್ಲಿ ಶಬರಿಯೆಂಬ ವೃದ್ಧೆಯ ಆಶ್ರಮಕ್ಕೆ ಹೋಗುತ್ತಾನೆ. ಶ್ರೀರಾಮನ ದರ್ಶನದಿಂದ ಆಕೆಗೆ ಸದ್ಗತಿ ದೊರಕುವುದೆಂದು ಅವಳ ಗುರುಗಳು ತಿಳಿಸಿದ್ದರು. ಶಬರಿ ಆ ಪ್ರಕಾರ ಶ್ರೀರಾಮನ ಆಗಮನವನ್ನೇ ಬಹಳ ದೀರ್ಘಕಾಲದಿಂದ ಕಾಯುತ್ತಿದ್ದಳು. ಕೊನೆಗೊಮ್ಮೆ ಶ್ರೀರಾಮ ತನ್ನ ಕುಟೀರಕ್ಕೆ ಬಂದಾಗ ಅವಳಿಗೆ ಎಲ್ಲಿಲ್ಲದ ಆನಂದ!




ಸಂಭ್ರಮದಿಂದ ಆಕೆ ಶ್ರೀರಾಮನನ್ನು ಆದರಿಸಿ, ಪೂಜಿಸಿ, ಸತ್ಕರಿಸಿದಳು. ''ನಿನಗಾಗಿ ರುಚಿಕರವಾದ ಹಣ್ಣುಗಳನ್ನು ಸಂಗ್ರಹಿಸಿದ್ದೇನೆ. ದಯವಿಟ್ಟು ಸ್ವೀಕರಿಸು'' ಎಂದು ಶಬರಿ ಅವನಿಗೆ ಹಲವು ಬಗೆಯ ಹಣ್ಣುಗಳನ್ನು ಸಮರ್ಪಿಸಿದಳು. ಶ್ರೀರಾಮನು ಅವುಗಳನ್ನು ಸ್ವೀಕರಿಸಿ, ಆನಂದಗೊಂಡನು. ಆದರೆ ಶಬರಿ ಈಗಾಗಲೇ ಆ ಹಣ್ಣುಗಳನ್ನು ರುಚಿನೋಡುವ ಸಲುವಾಗಿ ತಿಂದಿದ್ದಾಳೆ ಎಂದು ಲಕ್ಷ್ಮಣನಿಗೆ ಸಂದೇಹವುಂಟಾಯಿತು; ಶ್ರೀರಾಮನಿಗೆ ಇದನ್ನು ತಿಳಿಸಿ, ಆ ಹಣ್ಣುಗಳು ತಿನ್ನಲು ಯೋಗ್ಯವಲ್ಲ ಎಂದನು. ಆಗ ಶ್ರೀರಾಮನು ಹೇಳುತ್ತಾನೆ: ''ಈಕೆ ಅತ್ಯಂತ ಭಕ್ತಿಯಿಂದ ಈ ಹಣ್ಣುಗಳನ್ನು ಅರ್ಪಿಸಿದ್ದಾಳೆ. ಭಕ್ತಿಯಿಂದ ಅತ್ಯಂತ ರುಚಿಕರವಾದ ಹಣ್ಣುಗಳನ್ನು ಅರ್ಪಿಸಬೇಕೆಂಬ ಭಾವನೆಯಿಂದ ಆಕೆ ರುಚಿ ನೋಡಿದ್ದಾಳೆ. ಆದ್ದರಿಂದ ಅದರಲ್ಲಿ ದೋಷವಿಲ್ಲ. ಈ ಹಣ್ಣುಗಳು ಅದೆಷ್ಟು ರುಚಿಕರವಾಗಿದೆ ಎಂಬುದನ್ನು ನೀನೇ ತಿಂದು ನೋಡು. ಆಗ ಮಾತ್ರ ನಿನಗೆ ಅರ್ಥವಾದೀತು.''

ಪರಿಶುದ್ಧವಾದ ವಸ್ತುಗಳನ್ನು ಭಗವಂತನಿಗೆ ಅರ್ಪಿಸಬೇಕು; ನೈವೇದ್ಯ ನೀಡುವ ಮೊದಲೇ ತಿಂದು, ಅನಂತರ ಅದನ್ನು ಅರ್ಪಿಸುವುದೆ? ಶಬರಿಯ ಫಲಸಮರ್ಪಣೆ ಈ ಬಗೆಯದಲ್ಲವೆ? ಭಕ್ತಿ, ಸೇವೆ, ಸತ್ಕಾರದ ಭರದಲ್ಲಿ ಆಚಾರ, ನಡವಳಿಕೆಗಳನ್ನು ಮರೆಯಬಹುದೆ? – ಈ ಎಲ್ಲ ಪ್ರಶ್ನೆಗಳಿಗೆ ಶ್ರೀರಾಮನೇ ಉತ್ತರ ನೀಡಿದ್ದಾನೆ. ಅತ್ಯುತ್ತಮ ವಸ್ತುವನ್ನೇ ಭಗವಂತನಿಗೆ ಅರ್ಪಿಸಬೇಕೆಂಬ ಭಕ್ತಿಯ ಪಕ್ವತೆ ಇಲ್ಲಿ ಮುಖ್ಯವಾಗಿದೆ. ಭಗವಂತ ಹೃದಯವನ್ನು ನೋಡುತ್ತಾನೆ, ಬಾಹ್ಯಾಚಾರಗಳನ್ನಲ್ಲ ಎಂಬುದನ್ನು ಶಬರಿಯ ಕಥೆ ತಿಳಿಸಿಕೊಡುತ್ತದೆ.

### 'ಮುಡಿದ ಹೂವನ್ನೇ ಅರ್ಪಿಸಿದವಳು'

ತಮಿಳುನಾಡಿನ ಆಳ್ವಾರ್ ಸಂತರಲ್ಲಿ ಒಬ್ಬಳಾದ ಗೋದಾದೇವಿಯ ಕಥೆ ಅತ್ಯಂತ ರೋಚಕವಾಗಿದೆ. ವಿಷ್ಣುಚಿತ್ತರೆಂಬ ಹಿರಿಯ ಆಳ್ವಾರ್ ಒಂದು ದಿನ ಹೂದೋಟದಲ್ಲಿ ಏನೋ ಕೆಲಸ ಮಾಡುತ್ತಿದ್ದರು. ಅತ್ಯಂತ ಸುಂದರವಾದ ಒಂದು ಹೆಣ್ಣು ಮಗುವನ್ನು ಅಲ್ಲಿ ಕಂಡು, ಅದನ್ನು ಎತ್ತಿಕೊಂಡು ಮನೆಗೆ ಬಂದರು. ಭಗವಂತನೇ ತನಗೆ ಕರುಣಿಸಿದ ಮಗು ಇದು ಎಂದು ಅವರು ಭಾವಿಸಿ, ಆಕೆಗ ಗೋದಾ ಎಂದು ಹೆಸರಿಟ್ಟರು. ಪ್ರತಿದಿನ ತುಳಸೀ ಪತ್ರೆಗಳನ್ನು ಹಾಗೂ ಹೂವುಗಳನ್ನು ಸಂಗ್ರಹಿಸಿ, ಹಾರ ಮಾಡಿ ಭಗವಂತನಿಗೆ ಸಮರ್ಪಿಸುತ್ತಿದ್ದರು ವಿಷ್ಣುಚಿತ್ತರು. ಹಾರವನ್ನು ಕಟ್ಟಿ, ಬುಟ್ಟಿಯಲ್ಲಿಟ್ಟು ವಿಷ್ಣುಚಿತ್ತರು ಎಲ್ಲಿಗೋ ಹೋಗುತ್ತಿದ್ದರು; ಆಗ ಗೋದಾದೇವಿ ಆ ಹಾರವನ್ನು ತಾನೇ ಧರಿಸಿಕೊಂಡು, ಕನ್ನಡಿಯಲ್ಲಿ ತನ್ನ ಸೌಂದರ್ಯವನ್ನು ನೋಡಿ ನಲಿದು, ಮತ್ತೆ ಬುಟ್ಟಿಯಲ್ಲಿ ಇಟ್ಟುಬಿಡುತ್ತಿದ್ದಳು. ಒಂದು ದಿನ ವಿಷ್ಣುಚಿತ್ತರು ತಾನು ದೇವರಿಗಾಗಿ ಕಟ್ಟಿದ್ದ ಹಾರವನ್ನು ದೇವರಿಗೆ ಸಮರ್ಪಿಸುವ ಸಮಯದಲ್ಲಿ ಅರ್ಚಕರು ಅದರಲ್ಲಿ ಒಂದು ಕೂದಲನ್ನು ಕಂಡರು. ಇದನ್ನು ದೇವರಿಗೆ ಸಮರ್ಪಿಸಲಾಗದು ಎಂದು ಹಾರವನ್ನು ಎಸೆದು, ವಿಷ್ಣುಚಿತ್ತರನ್ನು ಅರ್ಚಕರು ನಿಂದಿಸಿದರು. ದುಃಖಿತರಾದ ವಿಷ್ಣುಚಿತ್ತರು ಮನೆಗೆ ಬಂದರು. ಮಗಳನ್ನು ವಿಚಾರಿಸಿದಾಗ ಅವಳು ತಾನೇನು ಮಾಡುತ್ತಿದ್ದಳೋ ಅದನ್ನೇ ಹೇಳಿದಳು. ಕೋಪಗೊಂಡ ವಿಷ್ಣುಚಿತ್ತರು ಗೋದಾದೇವಿಯನ್ನು ಚೆನ್ನಾಗಿ ಬೈದುಬಿಟ್ಟರು. ಅಂದು ರಾತ್ರಿ ಅವರಿಗೆ ಕನಸಿನಲ್ಲಿ ವಿಷ್ಣು ಕಾಣಿಸಿಕೊಂಡು, ''ನಿಮ್ಮ ಮಗಳು ಗೋದಾ ಮುಡಿದ ಹೂವಿನ ಹಾರವೇ ನನಗೆ ಅತ್ಯಂತ ಪ್ರಿಯ. ಅದನ್ನು ಮೊದಲಿನಂತೆಯೇ ಅರ್ಪಿಸಿ'' ಎಂದ. ಅಂತೆಯೇ ಮರುದಿನದಿಂದ ಮತ್ತೆ ವಿಷ್ಣುಚಿತ್ತರು ಎಂದಿನಂತೆ ಗೋದಾದೇವಿ ಮುಡಿದ ಹೂಗಳನ್ನು ದೇವರಿಗೆ ಅರ್ಪಿಸಿದರು. ಬಾಲ್ಯದಿಂದಲೇ ತಂದೆಯ ಮೂಲಕ ಕೃಷ್ಣನ ಕಥೆಗಳನ್ನು ಕೇಳಿ ಅರಿತಿದ್ದ ಗೋದಾದೇವಿ, ಗೋಪಿಯರಂತೆ ಕೃಷ್ಣನನ್ನೇ ತನ್ನ ಪತಿಯೆಂದು ಭಾವಿಸಿ, ಅದ್ಭುತ ಪ್ರೇಮ ಭಕ್ತಿಯನ್ನು ಬೆಳೆಸಿಕೊಂಡಿದ್ದಳು. ಯೌವನದಲ್ಲಿ ಈ ಭಕ್ತಿಯೇ ಅತ್ಯುನ್ನತ ಪರಾಭಕ್ತಿಯಾಗಿ ಮಾರ್ಪಟ್ಟಿತು. ಮುಂದೆ ಶ್ರೀರಂಗನಾಥನ ಸನ್ನಿಧಿಗೆ ತೆರಳಿದ ಗೋದಾದೇವಿ, ಶ್ರೀರಂಗನಾಥನಲ್ಲಿ ಐಕ್ಯಳಾದಳು. ಇದು ಗೋದಾದೇವಿಯ ಜೀವನ ಕಥೆ.



ಸರಳ, ಮುಗ್ಧ ಹಾಗೂ ತೀವ್ರ ಭಕ್ತಿಭಾವಗಳಿಂದ ಕೂಡಿದ ಗೋದಾದೇವಿ, ಕೃಷ್ಣನಿಗೆ ಹಾರ ಹೇಗೆ ಶೋಭಿಸುವುದೆಂದು ತಾನೇ ಮುಡಿದುಕೊಂಡು ನೋಡಿಕೊಳ್ಳುತ್ತಿದ್ದಳು. ತಾನು ಮುಡಿದ ಹೂವನ್ನು ದೇವರಿಗೆ ಅರ್ಪಿಸಬಾರದೆಂಬ ಆಚಾರ-ಕಟ್ಟಳೆಗಳು ಅವಳ ಮುಗ್ಧ ಮನಸ್ಸನ್ನು ಆವರಿಸಲೇ ಇಲ್ಲ. ಎಲ್ಲಿ ಶುದ್ಧ ಭಾವನೆಯಿರುವುದೋ, ಅಂತಹ ಭಕ್ತಿಯೇ ಭಗವಂತನಿಗೆ ಪ್ರಿಯ ಎಂಬುದು ಇಲ್ಲಿ ಪ್ರಕಟಗೊಂಡಿದೆ. ಭಕ್ತನ ಮನೋಭಾವ ಇಂಥದು. ಜಗತ್ತು ಯಾವುದನ್ನು ಆಚಾರ, ಅನಾಚಾರ, ನಿಷೇಧ ಎಂದು ಭಾವಿಸುವುದೋ ಅದೇ ಇಲ್ಲಿ ಯೋಗ್ಯವೆನಿಸುತ್ತದೆ. ತೋರಿಕೆಗೆ ಅಸಮಂಜಸ, ನೀತಿಗೆ ವಿರುದ್ಧ ಎಂದು ಕಂಡುಬರುವುದೂ ಇಲ್ಲಿ ಭಕ್ತಿಯ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತವೆ. ಸ್ವತಃ ಹಿರಿಯ ಸಂತರಾಗಿದ್ದ ಗೋದಾದೇವಿಯ ತಂದೆಗೂ ಈ ವಿಷಯ ಮೊದಲಿಗೆ ಅರ್ಥವಾಗಿರಲಿಲ್ಲ. ಭಗವಂತನ ಕೃಪೆಯಿಂದ ತನ್ನ ಮಗಳ ಭಕ್ತಿ ಎಂಥದು ಎಂದು ಅರ್ಥವಾದಾಗ, ಅವರೂ ಗೋದಾದೇವಿಯ ದೈವೀ ಮಹಿಮೆಗೆ ತಲೆಬಾಗಿದರು.

ಈ ಎಲ್ಲ ಕಥೆಗಳಲ್ಲಿ ಒಂದು ಸಮಾನ ಅಂಶ ಕಂಡುಬರುತ್ತದೆ. ಸಾಮಾನ್ಯವಾಗಿ ಜನರಲ್ಲಿರುವ ಭಾವನೆ, ಆಚರಣೆ, ನಂಬಿಕೆಗಳಿಗೆ ವಿರುದ್ಧವಾಗಿ ಅವರು ವರ್ತಿಸುತ್ತಾರೆ. ಕುಂತಿಯ ಪ್ರಾರ್ಥನೆಯಾಗಲಿ, ಸೂರದಾಸನ ಕೋರಿಕೆಯಾಗಲಿ, ಶಬರಿ–ಗೋದಾದೇವಿ ಇವರು ಭಕ್ತಿಯ ಭರದಲ್ಲಿ ವರ್ತಿಸಿದ ರೀತಿಯಾಗಲಿ, ಸಾಧಾರಣವಾಗಿ ಯಾರೂ ಮಾಡದ ಕೆಲಸ. ಎಲ್ಲಿ ಅಸಹಜ ಸಂಗತಿಗಳೂ ಅತ್ಯಂತ ಶ್ರೇಷ್ಠವಾದ ಗುಣವಾಗಿ ಮಾರ್ಪಡುವುದೋ – ಅಲ್ಲಿನ ಮಹಿಮೆ ಅತ್ಯಂತ ಉಜ್ವಲವಾಗಿರುತ್ತದೆ. ಆಧ್ಯಾತ್ಮಿಕ ವ್ಯಕ್ತಿಗಳ ಜೀವನವೆಲ್ಲವೂ ಒಂದು ರೀತಿ ಅಸಹಜ, ಅಸಾಧಾರಣ. ಆದ್ದರಿಂದ ಅವರು ಪ್ರಪಂಚದ ಎಲ್ಲವನ್ನೂ ನೋಡುವ, ಗ್ರಹಿಸುವ ರೀತಿ ಬೇರೆಯೇ ಬಗೆಯದು. ದೈವೀಕೇಂದ್ರಿತ ದೃಷ್ಟಿಕೋನವೇ ಅವರ ಅಂತರಂಗವನ್ನು ತುಂಬಿಕೊಂಡಿರುವುದರಿಂದ, ಅವರು ಜಗತ್ತನ್ನು ಕಾಣುವ ಬಗೆ ಬೇರೆ; ಜಗತ್ತಿನಲ್ಲಿ ಬದುಕುವ ಬಗೆ ಬೇರೆ. ಇದನ್ನು ಕೆಲವರು ಮಾತ್ರ ಅರ್ಥಮಾಡಿಕೊಳ್ಳಬಲ್ಲರು. ಇತರರ ಪಾಲಿಗೆ ಅವರು ಅಸಹಜರು, ನಿಂದ್ಯರು, ತಿರಸ್ಕಾರಯೋಗ್ಯರು, ಅಥವಾ 'ಹುಚ್ಚ'ರು. ಶ್ರೀರಾಮಕೃಷ್ಣರನ್ನೂ ಜನರು ಈ ರೀತಿಯಲ್ಲೇ ಕಂಡರು. ಆದರೆ ಪ್ರಪಂಚಕ್ಕೆ ಸತ್ಯದರ್ಶನವಾಗುವುದಕ್ಕೆ ತುಸು ಸಮಯ ಬೇಕಾಗುತ್ತದೆ. ಕಾಲಕ್ರಮದಲ್ಲಿ ಅವರಿಗೆ ಅರ್ಥವಾಗುತ್ತದೆ; ಆದರೆ ಅರ್ಥವಾಗುವಷ್ಟರಲ್ಲಿ ಅಂಥ ಮಹಾವ್ಯಕ್ತಿಗಳು ಈ ಜಗತ್ತಿನಿಂದ ನಿರ್ಗಮಿಸಿರುತ್ತಾರೆ. ಇದೇ ಪ್ರಪಂಚದ ವ್ಯಂಗ್ಯ: ಇದ್ದಾಗ ಯಾವುದೂ ವಿಶೇಷವೆನಿಸದು. ಇಲ್ಲದಾಗ 'ಅಯ್ಯೋ! ಎಂಥ ಅಮೂಲ್ಯ ವಸ್ತು ಕಳೆದುಹೋಯಿತು' ಎಂದು ಪರಿತಪಿಸುತ್ತೇವೆ. ಸಂತರ ಜೀವನದಲ್ಲೂ ಈ ಮಾತು ಸತ್ಯ.

### ನವೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧೨ | ಮಂಗಳವಾರ | ಏಕಾದಶಿ |
| ೧೩ | ಬುಧವಾರ | ಸ್ವಾಮಿ ಸುಬೋಧಾನಂದ ಜಯಂತಿ |
| ೧೫ | ಶುಕ್ರವಾರ | ಸ್ವಾಮಿ ವಿಜ್ಞಾನಾನಂದ ಜಯಂತಿ |
| ೨೬ | ಮಂಗಳವಾರ | ಏಕಾದಶಿ |